ಅವರು ಏನೂ ಮಾಡಲು ಸಾಧ್ಯವಿಲ್ಲಾಂತ ಹೇಳಿದರಂತೆ. ಸಾವನ್ನು ಮುಂದೂಡಲು ಔಷಧಿ ಕೊಡ್ತಿದ್ದಾರೆ. ಎಷ್ಟು ದಿನ ಮುಂದೂಡಲು ಸಾಧ್ಯ? ನನಗೆ ನಾನು ದಿನ ಕಳೆದಂತೆ ಸಾವಿಗೆ ಹತ್ತಿರವಾಗ್ತಿದ್ದೇನೆ ಅನ್ನಿಸ್ತಿದೆ."

"ಸುಮೇರು ಏನೇನೋ ಮಾತಾಡಬೇಡ."

"ಪ್ಲೀಸ್ ನನ್ನನ್ನು ತಡೆಯಬೇಡ. ನನಗೆ ಶಿವಾನಿದೇ ಯೋಚನೆ. ಅವಳಿಗೆ ನನ್ನ ಸ್ಥಿತಿ ನೋಡಿ ಹುಚ್ಚು ಹಿಡಿದಂತಾಗಿದೆ. ಅವಳು ಒಳಗೆ ಬರೋದೇ ಇಲ್ಲ. ಬಾಗಿಲಲ್ಲಿ ನಿಂತು ನೋಡಿ ಅಳ್ತಾ ಹೊರಟುಹೋಗ್ತಾಳೆ."

"ಶಿವಾನಿ ಇಲ್ಲಿಲ್ವಾ?"

"ಇದಾಳೆ, ಆದ್ರೆ ಪ್ರತಿದಿನ ನನ್ನ ಹೆಸರಿನಲ್ಲಿ ಪೂಜೆ ಮಾಡಿಸಕ್ಕೆ ದೇವಸ್ಥಾನಗಳನ್ನು ಸುತ್ತುತ್ತಿದ್ದಾಳೆ. ಇವತ್ತು ಅವರ ಮನೇಲಿ ಮೃತ್ಯುಂಜಯ ಜಪ ಇಟ್ಕೊಂಡಿದ್ದಾರೆ. ಅದಕ್ಕೆ ಹೋಗಿದ್ದಾಳೆ."

ಸೂರ್ಯ ಅವನ ಜೊತೆ ಭಾನುವಾರ ಮಧ್ಯಾಹ್ನದವರೆಗೂ ಇದ್ದು ವಾಪಸ್ಸಾದ. ಅವನಿಗೆ ಸುಮೇರುವಿನ ಸ್ಥಿತಿನೋಡಿ ತುಂಬಾ ಬೇಸರವಾಗಿತ್ತು. "ಸಾವಿನ ಬಾಗಿಲು ತಟ್ಟುತ್ತಿರುವವನಿಗೆ ನಾನು ಯಾವ ರೀತಿ ಸಹಾಯ ಮಾಡಲು ಸಾಧ್ಯ?" ಎಂದುಕೊಳ್ಳುತ್ತಿದ್ದ. ಅವನನ್ನು ನೋಡಲು ಪ್ರತಿವಾರ ಹೋಗಲಾರಂಭಿಸಿದ. ವಾರದಿಂದ ವಾರಕ್ಕೆ ಅವನ ಸ್ಥಿತಿ ಬಿಗಡಾಯಿಸುತ್ತಿತ್ತು. ಒಮ್ಮೆಯೂ ಅವನು ಶಿವಾನಿಯನ್ನು ಸುಮೇರುವಿನ ಮನೆಯಲ್ಲಿ ನೋಡಿರಲಿಲ್ಲ. ಅವನು ಮೈಸೂರಿನಿಂದ ವಾಪಸ್ಸಾದ ಕೂಡಲೇ ಅವನ ತಾಯಿ ಕೇಳುತ್ತಿದ್ದರು, "ಸುಮೇರು ಹೇಗಿದ್ದಾನೋ?"

"ದಿನಗಳನ್ನು ಎಣಿಸ್ತಿದ್ದಾನಮ್ಮ. ನಾನು ಏನು ಹೇಳಲಿ?"

"ಶಿವಾನಿ ಹೇಗಿದ್ದಾಳೆ?"

"ಅವಳು ಯಾವುದೋ ದೇವಸ್ಥಾನಕ್ಕೆ ಹೋಗಿದ್ದಳಮ್ಮ. ನನಗೆ ಸಿಗಲಿಲ್ಲ."

"ಪ್ರತಿವಾರ ಇದೇ ಉತ್ತರ ಹೇಳ್ತಿಯಲ್ಲೋ? ಅವಳ ಗಂಡ ನರಳ್ತಿರೋದು ಬ್ಲಡ್ ಕ್ಯಾನ್ಸರ್‌ನಿಂದ. ಅವನು ಉಳಿಯಲ್ಲಾಂತ ಎಲ್ಲರಿಗೂ ಗೊತ್ತಿದೆ. ಸಾಯುವ ಗಂಡನ ಜೊತೆ ಕೊನೆಯವರೆಗೂ ಇರೋದು ಬಿಟ್ಟು, ಅವಳು ಯಾಕೆ ದೇವಸ್ಥಾನಗಳಿಗೆ ಅಲೆಯುತ್ತಿದ್ದಾಳೆ?"

"ಏನಾದ್ರೂ ಪವಾಡ ನಡೆಯಬಹುದೂಂತ ದೇವಸ್ಥಾನಗಳಿಗೆ ಹೋಗ್ತಿದ್ದಾಳೇನೋ?" ಸೂರ್ಯನ ಅಕ್ಕ ನಳಿನಿ ಹೇಳಿದಳು.

"ದೇವಸ್ಥಾನಗಳಿಗೆ ಹೋಗೋದ್ರಿಂದ ಪವಾಡ ನಡೆಯತ್ತೇನಮ್ಮಾ? ನರಳ್ತಿರುವ ಗಂಡನ ಜೊತೆ ಇದ್ದು, ಅವನ ಬೇಕುಬೇಡ ಗಮನಿಸ್ತಾ 'ದೇವರೇ ನನ್ನ ಗಂಡನಿಗೆ ಆಯಸ್ಸು ಕೊಡು' ಅಂತ ಕೇಳಕ್ಕಾಗಲ್ವಾ?" ಸೂರ್ಯನ ತಂದೆ ಕೇಳಿದರು.

ಆ ಶನಿವಾರ ಅವನು ಸುಮೇರುವನ್ನು ನೋಡಲು ಹೋದಾಗ, ಅವನ ಸ್ಥಿತಿ ಬಿಗಾಡಾಯಿಸಿ, ನರಳಾಟ ಹೆಚ್ಚಾಗಿತ್ತು. ಊಟ, ತಿಂಡಿ ಬಿಟ್ಟುಬಿಟ್ಟಿದ್ದ. ವಾರಕ್ಕೆ ಮೂರುದಿನ ಡ್ರಿಪ್ಸ್ ಹಾಕುತ್ತಿದ್ದರು. ಮೈಯೆಲ್ಲಾ ಉರಿಯೆಂದು ಒದ್ದಾಡುತ್ತಿದ್ದ.

"ಸೂರ್ಯ ಪುನಃ ನಾನು ನಿನ್ನನ್ನು ನೋಡಲ್ಲ ಅನ್ನಿಸುತ್ತೆ."

"ಯಾಕೋ ಹಾಗಂತೀಯಾ?"

"ಸಾವು ನನ್ನದೆಯ ಮೇಲೆ ಕುಳಿತು ಅಣಕಿಸುತ್ತಿದೆ. 'ಇವತ್ತು ಬರಲಾ? ನಾಳೆ ಬರಲಾ?'